ಒಂದು ತಾಂತ್ರಿಕ ಸೇವಾ ಕೇಂದ್ರವಿದ್ದು ಈ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಯ ಹುದ್ದೆಯನ್ನು ಉನ್ನತೀಕರಿಸಿ ಅನೇಕರಿಗೆ ಸ್ಥಳಾಂತರಿಸಲಾಗಿದೆ. ಉಳಿದ ಸಿಬ್ಬಂದಿಯಲ್ಲಿ ಕನಿಷ್ಠ ಸಿಬ್ಬಂದಿಯನ್ನು ಹೊರತುಪಡಿಸಿ ಉಳಿದ ಸಿಬ್ಬಂದಿಯನ್ನು ಹೊಸದಾಗಿ ಸೃಜನೆಯಾಗಿರುವ ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ನಗರಪಾಲಿಕೆಯ ಪೌರಕಾರ್ಮಿಕರಿಗೆ ಗೃಹ ಮತ್ತು ನಿವೇಶನದ ಕೊರತೆ.

2660 (3032) ಶ್ರೀ ಜಬ್ಬಾರ್ ಖಾನ್ ಹೆಚ್. ಹೊನ್ನಳ್ಳಿ (ಹುಬ್ಬಳ್ಳಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ನಗರಪಾಲಿಕೆಯ ಪೌರಕಾರ್ಮಿಕರ ಗೃಹ ಮತ್ತು ನಿವೇಶನಗಳ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಎಷ್ಟು ಮನೆಗಳನ್ನು ಕಟ್ಟಲು ಸರ್ಕಾರ ಅನುಮತಿ ನೀಡಿದೆ.?

ಇ) ಮನೆಗಳಿಲ್ಲದ ಪೌರ ಕಾರ್ಮಿಕರ ಸಂಖ್ಯೆ ಎಷ್ಟು? (ವಿವರ ನೀಡುವುದು)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಹೌದು.

ಆ) ಒಟ್ಟು 200 ಮನೆಗಳನ್ನು ಕಟ್ಟುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಒಟ್ಟು 768.

ಮಹಾನಗರಪಾಲಿಕೆಯಲ್ಲಿ 1092 ಪೌರ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದು ಅವರಲ್ಲಿ 324 ಪೌರಕಾರ್ಮಿಕರಿಗೆ ಮನೆಗಳನ್ನು ನೀಡಲಾಗಿದೆ. ಉಳಿದ 768 ಪೌರಕಾರ್ಮಿಕರಿಗೆ ಮನೆಗಳನ್ನು ನೀಡಬೇಕಾಗಿದೆ.

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಲಾದ ನಿವೇಶನಗಳ ಸಂಖ್ಯೆ

2661 (3033) ಶ್ರೀ ಜಬ್ಬಾರ್ ಖಾನ್ ಹೈಯತ್ ಖಾನ್ ಹೊನ್ನಳ್ಳಿ (ಹುಬ್ಬಳ್ಳಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ 1999 ರಿಂದ 2001ನೇ ಸಾಲಿನವರೆಗೆ ಎಷ್ಟು ನಿವೇಶನಗಳನ್ನು ಹಂಚಲಾಗಿದೆ.

ಆ) ಅ.ಬ.ಕ. ವರ್ಗದ ಪ್ರಕಾರ ಪ್ರತಿ ವರ್ಷದಂತೆ ವಿವರ ನೀಡುವುದು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) 3043

ಆ) ಪ್ರಾಧಿಕಾರದಿಂದ 1999 ರಿಂದ 2001ನೇ ಸಾಲಿನವರೆಗೆ ವಿತರಣೆ ಮಾಡಲಾದ ನಿವೇಶನಗಳ ವರ್ಗವಾರು ವಿವರ ಕೆಳಕಂಡಂತಿದೆ:

ವರ್ಗವಾರು		19999-2000ನೇ ಸಾಲಿನಲ್ಲಿ		2000-2001ನೇ ಸಾಲಿನಲ್ಲಿ	
ಅ.	ಹಿಂದುಳಿದ ವರ್ಗ (ಬಿ.ಟಿ.)	06		10	
ಆ.	ಅನುಸೂಚಿತವರ್ಗ (ಎಸ್‌ಟಿ)	40		46	
ಕ.	ಅನುಸೂಚಿತ ಜಾತಿ (ಎಸ್‌ಸಿ)	258		176	
ಡ	.ಮಾಜಿ ಸೈನಿಕರು	35		59	
ಇ.	ರಾಜ್ಯ ಸರ್ಕಾರಿ ನೌಕರರು	194		160	
ಎಫ್.	ಕೇಂದ್ರ ಸರ್ಕಾರಿ ನೌಕರರು	112		96	
ಜಿ.	ಸಾಮಾನ್ಯ	893		980	
ಹೆಚ್.	ವಿವೇಚನಾ ಕೋಟ	-		19	
ಐ.	ಅಂಗವಿಕಲರು	21		20	
	ಒಟ್ಟು	1527	+	1516	3043

ರಾಜ್ಯದಲ್ಲಿ ಪ.ಜಾ.ಪ.ಪಂ. ಜನರಿಗೆ ಕೈಗಾರಿಕೆ ಸ್ಥಾಪನೆ ಮಾಡಲು ಸೌಲಭ್ಯಗಳ ನೀಡಿಕೆ

2663(3052) ಶ್ರೀ ಕರಿಯಣ್ಣ (ಹೊಳಿಹೊನ್ನೂರು) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಯಾವ ಯಾವ ಸವಲತ್ತುಗಳನ್ನು ನೀಡಲಾಗುವುದು; (ವಿವರ ನೀಡುವುದು)

ಆ) ಕೈಗಾರಿಕೆಗೆ ಕಚ್ಚಾ ವಸ್ತುಗಳನ್ನು ಕಡಿಮೆ ಬೆಲೆ ಮತ್ತು ಆದ್ಯತೆ ಮೇಲೆ ಕೊಡಲು ಯಾವುದಾದರೂ ನಿಯಮಗಳು ಇವೆಯೇ?